ಗುತ್ತಿಗೆ ಆಧಾರದಲ್ಲಿ ಸೇವೆ ಸಲ್ಲಿಸುತ್ತಿರುವ ನರ್ಸ್‌ಗಳು

213(297); ಶ್ರೀ ರವಿ ಸಿ.ಟಿ. (ಚಿಕ್ಕಮಗಳೂರು)

ಅ) ರಾಜ್ಯದಲ್ಲಿ ವಿವಿಧ ಆಸ್ಪತ್ರೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ನರ್ಸ್‌ಗಳ ಸಂಖ್ಯೆ ಹಾಗೂ ಎಷ್ಟು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ (ಜಿಲ್ಲಾವಾರು ವಿವರ ನೀಡುವುದು);

ಆ) ರಾಜ್ಯದಲ್ಲಿ ವಿವಿಧ ಆಸ್ಪತ್ರೆಗಳಲ್ಲಿ ಖಾಲಿ ಇರುವ ನರ್ಸ್‌ಗಳ ಹುದ್ದೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು);

ಇ) ಆಸ್ಪತ್ರೆಗೆ ಬರುವ ರೋಗಿಗಳ ಆರೈಕೆ ಹಾಗೂ ಶುಶ್ರೂಷಣೆ ಮಾಡಲು ಇಂಡಿಯನ್ ನರ್ಸಿಂಗ್ ಕೌನ್ಸಿಲ್ ನಿಯಮಾವಳಿ ಅನ್ವಯ ಇರಬೇಕಾದ ನರ್ಸ್‌ಗಳೆಷ್ಟು; ಹಾಗೂ ರಾಜ್ಯದ ಆಸ್ಪತ್ರೆಗಳಲ್ಲಿ ನಿಯಮಾವಳಿಯನ್ವಯ ಇರಬೇಕಾದ ನರ್ಸ್‌ಗಳು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಖಾಲಿ ಇರುವ ಹುದ್ದೆಗಳ ಹಿನ್ನೆಲೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ನರ್ಸ್‌ಗಳ ಪೈಕಿ 143 ಜನ ಶುಶ್ರೂಷಕರ ತರಬೇತಿ ಪೂರ್ಣಗೊಳಿಸಿ 2001ರಲ್ಲಿ ಎ.ಎನ್.ಎಮ್ ಗಳಾಗಿ ಕೆಲಸಕ್ಕೆ ಸೇರಿ ನಂತರ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ನರ್ಸ್‌ಗಳನ್ನು ಖಾಯಂ ಗೊಳಿಸಲು ಸರ್ಕಾರಕ್ಕಿರುವ ತೊಂದರೆ ಏನು;

ಉ) ಖಾಯಂ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ವಿವಿಧ ಆಸ್ಪತ್ರೆಗಳಲ್ಲಿ ರಾಜ್ಯ ವಲಯದಲ್ಲಿ 694 ಶುಶ್ರೂಷಕರು ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿದ್ದಾರೆ. ಹಾಗೂ ಎನ್.ಆರ್.ಹೆಚ್.ಎಂ. ಅಡಿಯಲ್ಲಿ 3965 ಶುಶ್ರೂಷಕರು ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿದ್ದಾರೆ. ರಾಜ್ಯ ವಲಯದಲ್ಲಿ

ಶುಶ್ರೂಷಕರು 2001 ರಿಂದ ವಿವಿಧ ದಿನಾಂಕಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ (ಜಿಲ್ಲಾವಾರು ವಿವರ ಅನುಬಂಧ–1ರಲ್ಲಿ ನೀಡಲಾಗಿದೆ)

ಆ) ರಾಜ್ಯದಲ್ಲಿ ವಿವಿಧ ಆಸ್ಪತ್ರೆಗಳಲ್ಲಿ 1595 ನರ್ಸ್‌ಗಳ ಹುದ್ದೆಗಳು ಖಾಲಿ ಇವೆ (ಜಿಲ್ಲಾವಾರು ವಿವರ ಅನುಬಂಧ–2ರಲ್ಲಿ ನೀಡಲಾಗಿದೆ)

ಇ) ಆಸ್ಪತ್ರೆಗೆ ಬರುವ ರೋಗಿಗಳ ಆರೈಕೆ ಹಾಗೂ ಶುಶ್ರೂಷಣೆ ಮಾಡಲು ಇಂಡಿಯನ್ ನರ್ಸಿಂಗ್ ಕೌನ್ಸಿಲ್ ನಿಯಮಾವಳಿ ಪ್ರಕಾರ 6 ರೋಗಿಗಳಿಗೆ ಒಬ್ಬರು ನರ್ಸ್ ಇರಬೇಕು.

ಆದರೆ ರಾಜ್ಯದ ಸರ್ಕಾರಿ ಆಸ್ಪತ್ರೆಗಳಿಗೆ ಇಂಡಿಯನ್ ನರ್ಸಿಂಗ್ ಕೌನ್ಸಿಲ್ ನಿಯಮಾವಳಿ ಅನ್ವಯಿಸುವುದಿಲ್ಲ.

ಈ) ಮತ್ತು ಉ) ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುವ ಶುಶ್ರೂಷಕರನ್ನು ಸಕ್ರಮಗೊಳಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಈ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಬೇರೆ ರಾಜ್ಯಗಳಲ್ಲಿ ಅಂದರೆ ರಾಜಸ್ಥಾನ, ತಮಿಳುನಾಡು ಹಾಗೂ ಆಂಧ್ರಪ್ರದೇಶಗಳಲ್ಲಿ ವಿಭಿನ್ನ ಮಾದರಿಗಳನ್ನು ಅಳವಡಿಸಿರುವಂತೆ ಕರ್ನಾಟಕ ರಾಜ್ಯದಲ್ಲಿಯೂ ಅಳವಡಿಸಿಕೊಂಡು ಶುಶ್ರೂಷಕರನ್ನು ಸಕ್ರಮಗೊಳಿಸುವ ವಿಷಯ ಪರಿಶೀಲನೆಯಲ್ಲಿದೆ.

ಅನುಬಂದ–2

ರಾಜ್ಯದಲ್ಲಿ ಶುಶ್ರೂಷಕರ ಖಾಲಿ ಹುದ್ದೆಗಳ ಜಿಲ್ಲಾವಾರು ಮಾಹಿತಿ ಈ ಕೆಳಕಂಡಂತೆ ಇರುತ್ತದೆ.

1	ಮೈಸೂರು ಜಿಲ್ಲೆ	46
2	ಮಂಡ್ಯ ಜಿಲ್ಲೆ	40
3	ಚಿಕ್ಕಮಗಳೂರು ಜಿಲ್ಲೆ	49
4	ಹಾಸನ ಜಿಲ್ಲೆ	104
5	ಮಡಿಕೇರಿ ಜಿಲ್ಲೆ	13
6	ಮಂಗಳೂರು ಜಿಲ್ಲೆ	29
7	ಚಾಮರಾಜನಗರ ಜಿಲ್ಲೆ	60
8	ಉಡುಪಿ ಜಿಲ್ಲೆ	7
9	ಧಾರವಾಡ	7
10	ಬೆಳಗಾವಿ	32
11	ಹಾವೇರಿ	19
12	ಉ.ಕ. ಜಿಲ್ಲೆ	130
13	ವಿಜಾಪುರ	35
14	ಬಾಗಲಕೋಟೆ	31
15	ಗದಗ	19
16	ಬೆಂಗಳೂರು ಗ್ರಾಮಾಂತರ ಜಿಲ್ಲೆ	14
17	ಬೆಂಗಳೂರು ನಗರ ಜಿಲ್ಲೆ	31
18	ರಾಮನಗರ ಜಿಲ್ಲೆ	19
19	ಚಿತ್ರದುರ್ಗ ಜಿಲ್ಲೆ	56
20	ದಾವಣಗೆರೆ	25
21	ಕೋಲಾರ	67
22	ಚಿಕ್ಕಬಳ್ಳಾಪುರ	62

23	ಶಿವಮೊಗ್ಗ	41
24	ತುಮಕೂರು ಜಿಲ್ಲೆ	143
25	ಗುಲ್ಬರ್ಗಾ ತಾ॥	177
26	ಯಾದಗಿರಿ ಜಿಲ್ಲೆ	44
27	ಬಳ್ಳಾರಿ ಜಿಲ್ಲೆ	54
28	ಬೀದರ ಜಿಲ್ಲೆ	69
29	ಕೊಪ್ಪಳ ಜಿಲ್ಲೆ	21
30	ರಾಯಚೂರು ಜಿಲ್ಲೆ	26
	TOTAL	**1470**

ಅನುಬಂದ–1

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಶುಶ್ರೂಷಕರ ಜಿಲ್ಲಾವಾರು ವಿವರ

ಕ್ರಮ.ಸಂಖ್ಯೆ	ಜಿಲ್ಲೆಗಳ ಹೆಸರು	ಶುಶ್ರೂಷಕರು
1	ಬಾಗಲಕೋಟೆ	163
2	ಬೆಂಗಳೂರು ಗ್ರಾಮೀಣ	113
3	ಬೆಂಗಳೂರು ನಗರ	58
4	ಬೆಳಗಾಂ	303
5	ಬೀದರ್	169
6	ಬಿಜಾಪುರ	143
7	ಬಳ್ಳಾರಿ	191
8	ಚಾಮರಾಜನಗರ	128
9	ಚಿಕ್ಕಬಳ್ಳಾಪುರ	93
10	ಚಿಕ್ಕಮಗಳೂರು	54

11	ಚಿತ್ರದುರ್ಗ	146
12	ದಕ್ಷಿಣ ಕನ್ನಡ	72
13	ಧಾರವಾಡ	81
14	ದಾವಣಗೆರೆ	167
15	ಗದಗ	103
16	ಗುಲ್ಬರ್ಗಾ	277
17	ಹಾಸನ	141
18	ಹಾವೇರಿ	155
19	ಕೋಲಾರ	167
20	ಕೊಡಗು	42
21	ಕೊಪ್ಪಳ	160
22	ಮಂಡ್ಯ	103
23	ಮೈಸೂರು	99
24	ರಾಯಚೂರು	168
25	ರಾಮನಗರ	79
26	ಶಿವಮೊಗ್ಗ	111
27	ತುಮಕೂರು	184
28	ಉಡುಪಿ	47
29	ಉತ್ತರ ಕನ್ನಡ	96
30	ಯಾದಗಿರಿ	152
31	ರಾಜ್ಯ ವಲಯ	694
	ಒಟ್ಟು	**3965**